ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.519/2021

| | | | |
|---|---|---|---|
| ಹೆಸರು | : ರತ್ನಮ್ಮ | | ಸಿ .ಡಬ್ಲ್ಯೂ :4 |
| ಗಂಡನ ಹೆಸರು | : ಶಂಕರಲಿಂಗಪ್ಪ | | ಪಿ .ಡಬ್ಲ್ಯೂ :2 |
| ವಯಸ್ಸು | : 67 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸಸ್ಥಳ | : ಅತ್ತೀಕಟ್ಟೆ | | |

ಸಾಕ್ಷಿಯನ್ನು ದಿಃ 09-12-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಆರೋಪಿತರುಗಳು ಗೊತ್ತು . ಚಾಸಾ -1 ಗೊತ್ತು .

ದಿಃ 14-04-2021 ರಂದು ರಾತ್ರಿ 8.30 ಅಥವಾ 9.00 ರ ವೇಳೆಯಲ್ಲಿ ಆರೋಪಿತರುಗಳು ಮತ್ತು ಚಾಸಾ -1 ರವರು ಗಲಾಟೆ ಮಾಡಿಕೊಂಡಿದ್ದಾರೆ . ಚಾಸಾ -1 ರವರು ರಾತ್ರಿ 1.00 ಗಂಟೆ ವೇಳೆಯಲ್ಲಿ ಮನೆಗೆ ಬಂದಿದ್ದರು . ಅವರು ಹಣೆಯ ಎಡಭಾಗದಲ್ಲಿ ರಕ್ತ ಬರುತ್ತಿತ್ತು . ಏನಾಯಿತು ಎಂದು ನಾನು ಕೇಳದೆ . ಅಣ್ಣ ಹೊಡೆದಿದ್ದಾನೆ ಎಂದು ಅವರನ್ನು ತಿಳಿಸಿದನ್ನು . ನಂತರ ಅವರನ್ನು ನಾನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆ ತಂದೆ . ನಂತರ ಚಾಸಾ-1 ರವರು ಠಾಣೆಗೆ ದೂರು ನೀಡಿದ್ದಾರೆ , ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ . ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರುಗಳು ನೋಡಿ ಗುರುತಿಸಿದ್ದಾರೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ದಿಃ 14-04-2021 ರಂದು ನಡೆದಿದೆ ಎಂದು ಹೇಳಲು ಗಲಾಟೆಯನ್ನು ನಾನು ಪ್ರತ್ಯೇಕ್ಷವಾಗಿ ನೋಡಿಲ್ಲ . ಚಾಸಾ -1 ರವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸಾಕ್ಷಿಯು ಜಾಂಡೀಸ್ ಆಗಿತ್ತು ಎಂದು ತಿಳಿಸಿದ್ದಾರೆ . ಅನಾರೋಗ್ಯದಿಂದ ಅವರು ಆಗಾಗ ಬೀಳುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಗಲಾಟೆ ನಡೆದ ಸಮಯ ಚಾಸಾ -1 ರವರು ಆರೋಗ್ಯವಾಗಿದ್ದರು , ಇತ್ತೀಚೆಗೆ ಅವರಿಗೆ ಜಾಂಡೀಸ್ ಆಗಿತ್ತು ಎಂದು ತಿಳಿಸಿದ್ದಾರೆ . ಚಾಸಾ -1 ರವರ ಮಾತು ಕೇಳಿ ಆರೋಪಿತರುಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ -1 ರವರನ್ನು ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರುಗಳು ಮತ್ತು ಚಾಸಾ -1 ರವರ ನಡುವೆ

ಯಾವುದೇ ಗಲಾಟೆ ಮತ್ತು ಹಲ್ಲೆ ನಡೆದಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.